ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ:ಮಾನಿಮ 125 ಆಡಸಿ 2023-24/154 ದಿನಾಂಕ: 15 MAY 2023

**ತಿದ್ದೋಲೆ**

**ವಿಷಯ:** ಮಂಡಳಿಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ತಾಂತ್ರಿಕ ಮತ್ತು ತಾಂತ್ರಿಕೇತರ ಅಧಿಕಾರಿ/ಸಿಬ್ಬಂದಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವ ಬಗ್ಗೆ.

**ಉಲ್ಲೇಖ:** ಕರಾಮಾನಿಮಂ, ಸುತ್ತೋಲೆ ಸಂಖ್ಯೆ:ಮಾನಿಮ 125 ಆಡಸಿ 2023-24/153 ದಿನಾಂಕ:11.05.2023.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದ ಅನ್ವಯ ಮಂಡಳಿಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ತಾಂತ್ರಿಕ ಮತ್ತು ತಾಂತ್ರಿಕೇತರ ಅಧಿಕಾರಿ/ಸಿಬ್ಬಂದಿಗಳನ್ನು ಗುರುತಿಸಿ ದಿನಾಂಕ: 05.06.2023 ರಂದು ನಡೆಯುವ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಗುವುದೆಂದು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿತ್ತು ಹಾಗೂ ನಿಗದಿತ ಅರ್ಜಿನಮೂನೆಯಲ್ಲಿ ಭರ್ತಿ ಮಾಡಿ ಸಲ್ಲಿಸಲು ಸೂಚಿಸಲಾಗಿತ್ತು, ಮುಂದುವರೆದು ಸದರಿ ಸುತ್ತೋಲೆಯ ಷರತ್ತು ಮತ್ತು ನಿಬಂಧನೆಗಳಲ್ಲಿನ ಕ್ರಮ ಸಂಖ್ಯೆ-03 (ಮಂಡಳಿಯಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿರಬೇಕು) ಎಂಬ ಷರತ್ತನ್ನು ತೆಗೆದು ಹಾಕಲಾಗಿದೆ.

ಸದಸ್ಯ ಕಾರ್ಯದರ್ಶಿ

ಪ್ರತಿಗಳು:

1) ಮಾನ್ಯ ಅಧ್ಯಕ್ಷರ ಆಪ್ತ ಸಹಾಯಕರು, ಅಧ್ಯಕ್ಷರ ಗಮನಕ್ಕೆ ತರುವ ಸಲುವಾಗಿ.
2) ಮುಖ್ಯ ಪರಿಸರ ಅಧಿಕಾರಿ-1, 2, ಮತ್ತು 3 ರವರ ಮಾಹಿತಿಗಾಗಿ.
3) ಕೇಂದ್ರ ಕಛೇರಿಯ ಅಧಿಕಾರಿ/ನೌಕರರ ಮಾಹಿತಿಗಾಗಿ.
4) ಮಂಡಳಿಯ ಪ್ರಾದೇಶಿಕ ಅಧಿಕಾರಿ ಹಾಗೂ ನೌಕರರುಗಳ ಮಾಹಿತಿಗಾಗಿ/ಹಿರಿಯ ಪರಿಸರ ಅಧಿಕಾರಿಗಳ ಹಾಗೂ ಕೇಂದ್ರ ಪರಿಸರ ಪ್ರಯೋಗಾಲಯದ ಅಧಿಕಾರಿ/ನೌಕರರ ಮಾಹಿತಿಗಾಗಿ.
5) ಹಿರಿಯ ಪರಿಸರ ಅಧಿಕಾರಿ, ಇ-ಗೌವರ್‌ನೆನ್ಸ್ ಇವರ ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಲು ತಿಳಿಸಿದೆ.
6) ಸೂಚನಾ ಫಲಕ/ಹೆಚ್ಚುವರಿ ಪ್ರತಿ.

ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ:ಮಾನಿಮ 125 ಆಡಸಿ 2023-24/ 153 ದಿನಾಂಕ: 11 MAY 2023

## ಸುತ್ತೋಲೆ

**ವಿಷಯ:** ಮಂಡಳಿಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ತಾಂತ್ರಿಕ ಮತ್ತು ತಾಂತ್ರಿಕೇತರ ಅಧಿಕಾರಿ/ಸಿಬ್ಬಂದಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವ ಬಗ್ಗೆ.

**ಉಲ್ಲೇಖ:** ದಿನಾಂಕ-05.05.2023 ರಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ-2023 ರ 2ನೇ ಪೂರ್ವಾಭಾವಿ ಸಭೆಯ ನಡವಳಿ.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದ ಅನ್ವಯ ಮಂಡಳಿಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ತಾಂತ್ರಿಕ ಮತ್ತು ತಾಂತ್ರಿಕೇತರ ಅಧಿಕಾರಿ/ಸಿಬ್ಬಂದಿಗಳನ್ನು ಗುರುತಿಸಿ ದಿನಾಂಕ: 05.06.2023 ರಂದು ನಡೆಯುವ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಗುತ್ತಿದ್ದು, ಸದರಿ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸುವವರು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯನ್ನು ಭರ್ತಿ ಮಾಡಿ ದಾಖಲಾತಿಗಳೊಂದಿಗೆ ದಿನಾಂಕ: 29.05.2023 ರ ಸಂಜೆ 5.00 ಗಂಟೆಯೊಳಗೆ ಜಾಗೃತಿ ಮತ್ತು ತರಬೇತಿ ವಿಭಾಗ, ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

**ಅರ್ಜಿ ಸಲ್ಲಿಸಲು ಷರತ್ತು ಮತ್ತು ನಿಬಂಧನೆಗಳು:**

1) ಮಂಡಳಿಯ ಅತ್ಯುತ್ತಮ ಅಧಿಕಾರಿ/ಸಿಬ್ಬಂದಿ (ತಾಂತ್ರಿಕ ಮತ್ತು ತಾಂತ್ರಿಕೇತರ) ಪ್ರಶಸ್ತಿಗೆ ಮಂಡಳಿಯ ಎಲ್ಲಾ ಹಂತದ ಖಾಯಂ ನೌಕರರು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
2) ಅಧಿಕಾರಿ/ಸಿಬ್ಬಂದಿಯ ವಿರುದ್ಧ ಲೋಕಾಯುಕ್ತ ಪ್ರಕರಣ/ಅಪರಾಧ ಪ್ರಕರಣ ಅಥವಾ ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ, ಅಂತಹ ಅಧಿಕಾರಿ/ಸಿಬ್ಬಂದಿಗಳು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
3) ಮಂಡಳಿಯಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿರಬೇಕು.
4) ಅರ್ಜಿಯನ್ನು ದಿನಾಂಕ 29/05/2023 ರ ಸಂಜೆ 5.00 ಗಂಟೆಯೊಳಗೆ ಶ್ರೀ ಬಿ.ರಾಜೇಶ್, ಹಿರಿಯ ಪರಿಸರ ಅಧಿಕಾರಿಗಳು, ಜಾಗೃತಿ ಮತ್ತು ತರಬೇತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು, ಇವರಿಗೆ ಖುದ್ದಾಗಿ ಅಥವಾ ಪೋಸ್ಟ್ ಮುಖಾಂತರ ಸಲ್ಲಿಸಬೇಕು. ತಡವಾಗಿ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
5) ಅರ್ಜಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸದರಿ ಕಾರ್ಯಕ್ರಮದ ಉಸ್ತುವಾರಿ ಅಧಿಕಾರಿಗಳಾದ ಶ್ರೀ ಟಿ. ಮಹೇಶ್., ಮುಖ್ಯ ಪರಿಸರ ಅಧಿಕಾರಿ-1, ಕೇಂದ್ರ ಕಛೇರಿ, ಡಾ. ಪಿ. ನಿರಂಜನ್., ಮುಖ್ಯ ಪರಿಸರ ಅಧಿಕಾರಿ-3 ಹಾಗೂ ಶ್ರೀ ರಾಜೇಶ್. ಬಿ., ಹಿರಿಯ ಪರಿಸರ ಅಧಿಕಾರಿ, ಕೇಂದ್ರ ಕಛೇರಿ ಇವರುಗಳನ್ನು ಸಂಪರ್ಕಿಸುವುದು.

ಸದಸ್ಯ ಕಾರ್ಯದರ್ಶಿ

ಪ್ರತಿಗಳು:

1. ಮಾನ್ಯ ಅಧ್ಯಕ್ಷರ ಆಪ್ತ ಸಹಾಯಕರು, ಅಧ್ಯಕ್ಷರ ಗಮನಕ್ಕೆ ತರುವ ಸಲುವಾಗಿ.
2. ಮುಖ್ಯ ಪರಿಸರ ಅಧಿಕಾರಿ-1, 2, ಮತ್ತು 3 ರವರ ಮಾಹಿತಿಗಾಗಿ.
3. ಕೇಂದ್ರ ಕಛೇರಿಯ ಅಧಿಕಾರಿ/ನೌಕರರ ಮಾಹಿತಿಗಾಗಿ.
4. ಮಂಡಳಿಯ ಪ್ರಾದೇಶಿಕ ಅಧಿಕಾರಿ ಹಾಗೂ ನೌಕರರುಗಳ ಮಾಹಿತಿಗಾಗಿ/ಹಿರಿಯ ಪರಿಸರ ಅಧಿಕಾರಿಗಳ ಹಾಗೂ ಕೇಂದ್ರ ಪರಿಸರ ಪ್ರಯೋಗಾಲಯದ ಅಧಿಕಾರಿ/ನೌಕರರ ಮಾಹಿತಿಗಾಗಿ.
5. ಹಿರಿಯ ಪರಿಸರ ಅಧಿಕಾರಿ, ಇ-ಗೌವರ್‌ನೆನ್ಸ್ ಇವರ ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಲು ತಿಳಿಸಿದೆ.
6. ಸೂಚನಾ ಫಲಕ/ಹೆಚ್ಚುವರಿ ಪ್ರತಿ.

“ವಿಶ್ವ ಪರಿಸರ ದಿನಾಚರಣೆ-2023”

2022-23ನೇ ಸಾಲಿನ ಅತ್ಯುತ್ತಮ ಅಧಿಕಾರಿ/ಸಿಬ್ಬಂದಿ ಪ್ರಶಸ್ತಿಗಾಗಿ ಅರ್ಜಿ

**ತಾಂತ್ರಿಕ ವಿಭಾಗ:** ತಾಂತ್ರಿಕ / ವೈಜ್ಞಾನಿಕ (ಆಯ್ಕೆ ಗುರುತಿಸಿ)

**ತಾಂತ್ರಿಕೇತರ ವಿಭಾಗ:** ಆಡಳಿತ / ಹಣಕಾಸು / ಕಾನೂನು / ಇತರೆ (ಆಯ್ಕೆ ಗುರುತಿಸಿ)

| | | |
|---|---|---|
| 1. | ಅಧಿಕಾರಿ/ಸಿಬ್ಬಂದಿಯ ಹೆಸರು | |
| 2. | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ ಮತ್ತು ಕಛೇರಿ | |
| 3. | ಮಂಡಳಿಯ ಸೇವೆಗೆ ಸೇರಿದ ದಿನಾಂಕ | |
| 4. | ಮಂಡಳಿಯಲ್ಲಿ ಸೇವೆ ಸಲ್ಲಿಸಿದ ಒಟ್ಟು ಅವಧಿ | ______ ವರ್ಷ ______ ತಿಂಗಳು |
| 5. | ಅಧಿಕಾರಿ/ಸಿಬ್ಬಂದಿ ಮಂಡಳಿಯ ಸೇವೆಗೆ ಸೇರಿದ ದಿನದಿಂದ ಇಲ್ಲಿಯವರೆಗೆ ಮಾಡಿದ ವಿಶೇಷ ಸಾಧನೆ; ವಿವರಗಳನ್ನು ದಾಖಲೆಗಳೊಂದಿಗೆ ಸಲ್ಲಿಸುವುದು | |
| 6. | ಅಧಿಕಾರಿ/ಸಿಬ್ಬಂದಿಯ ಸದರಿ ವಿಶೇಷ ಸಾಧನೆಯಿಂದ ಮಂಡಳಿಗೆ ಆದ ಆರ್ಥಿಕ ಉಳಿತಾಯ | |
| 7. | ಅಧಿಕಾರಿ/ಸಿಬ್ಬಂದಿಯ ಸದರಿ ವಿಶೇಷ ಸಾಧನೆಯಿಂದ ಮಂಡಳಿಗೆ ಆದ ಮೌಲ್ಯವರ್ಧನೆ | |
| 8. | ಈಗಾಗಲೇ ಅಧಿಕಾರಿ/ಸಿಬ್ಬಂದಿ ಪಡೆದಿರುವ ಪ್ರಶಸ್ತಿಗಳು/ಪುರಸ್ಕಾರಗಳ ವಿವರ | |
| 9. | ಅಂತರಾಷ್ಟ್ರೀಯ/ರಾಷ್ಟ್ರೀಯ ಮಟ್ಟದ ಜರ್ನಲ್‌ಗಳಲ್ಲಿ ವೈಜ್ಞಾನಿಕ ಲೇಖನ ಪ್ರಕಟವಾಗಿದ್ದಲ್ಲಿ, ವಿವರಗಳು | |
| 10. | ಅಂತರಾಷ್ಟ್ರೀಯ/ರಾಷ್ಟ್ರೀಯ ಮಟ್ಟದ ಸಮ್ಮೇಳನಗಳಲ್ಲಿ ಭಾಗವಹಿಸಿ ಪರಿಸರ ವಿಷಯಗಳ ಕುರಿತಾಗಿ ವಿಚಾರ ಮಂಡಿಸಿರುವ ಕುರಿತು ವಿವರಗಳು | |

**<u>ಸ್ವಯಂ ಘೋಷಣೆ:</u>**

ಮೇಲೆ ನೀಡಿರುವಂತಹ ಮಾಹಿತಿಯು ನನ್ನ ತಿಳುವಳಿಕೆ ಮಟ್ಟಿಗೆ ಸಂಪೂರ್ಣ ಸತ್ಯವಿದೆಯೆಂದು ಈ ಮೂಲಕ ಘೋಷಿಸುತ್ತೇನೆ. ತಪ್ಪು ಮಾಹಿತಿ ನೀಡಿದ್ದಲ್ಲಿ, ಮಂಡಳಿಯು ನನ್ನ ಅರ್ಜಿಯನ್ನು ತಿರಸ್ಕರಿಸಬಹುದೆಂಬುದನ್ನು ಅರಿತಿದ್ದೇನೆ.

**ದಿನಾಂಕ:** **ಅಧಿಕಾರಿ/ಸಿಬ್ಬಂದಿಯ ಹೆಸರು ಮತ್ತು ಸಹಿ**